ಎದ್ದು ನಿಂತು, 'ನಮಗೆ ನಿಮ್ಮ ಊಟ ಬೇಡ... ನಿಮ್ಮ ಟೀವಿ, ಮನೋರಂಜನೆ ಬೇಡ! ನಮಗೆ ಇರೇಜರ್ ಪೇಸ್ಟ್ ಕೊಡಿಸಿ, ಅದು ಇಲ್ಲದೆ ನಾವು ಬದುಕುವುದಿಲ್ಲ' ಎಂದು ಹೇಳಿದರು. ಅವರ ಜೊತೆ ಮತ್ತಿಬ್ಬರು ಹುಡುಗರು ಜೋರಾಗಿ ಧ್ವನಿಗೂಡಿಸಿದರು. ನಮ್ಮನ್ನು ಸ್ವತಂತ್ರರಾಗಿ ಇರಲು ಬಿಡಿ. ನಾವು ಮನೆಬಿಟ್ಟು ಬಂದಿದ್ದೆ ಆ ಕಾರಣದಿಂದ ಎಂದು ಹೇಳಿದರು. ಇಲ್ಲ ಸಾಧ್ಯವಿಲ್ಲ. ನಿಮಗೆ ಎರಡು ಆಯ್ಕೆಗಳಿವೆ. ಒಂದು ನೀವು ಈ ಕ್ಯಾಂಪಸಿನಲ್ಲಿ ಇರಿ, ಇಲ್ಲದಿದ್ದರೆ ನಿಮ್ಮ ಮನೆಗೆ ಹೋಗಿ ಎಂದಳವಳು. ವಾರಂಗಲ್‌ನ ವರ್ತಕರ ಮಗ ಮತ್ತೊಬ್ಬ ಬೆಳಗಾವಿ ಕಡೆಯ ಹುಡುಗ, ಇನ್ನಿಬ್ಬರು ರಾಯಚೂರು ಕಡೆಯ ಹುಡುಗರು. ಅದರಲ್ಲಿ ವಾರಂಗಲ್‌ನ ಹುಡುಗ ರಭಸವಾಗಿ ಇವಳತ್ತ ನುಗ್ಗಿ ಬಂದ, ಸೆಕ್ಯೂರಿಟಿಗಳು ಬೆನ್ನು ಹತ್ತಿದರು. ಅವನ ಕೈಯ್ಯಲ್ಲಿ ಒಂದು ರೇಜರ್ ಇತ್ತು. ಅವಳ ಗಮನಕ್ಕೆ ಅವನ ದಾಳಿಯ ಮುನ್ಸೂಚನೆ ಬಡಿದು ರಕ್ಷಣಾತ್ಮಕವಾಗಿ ಎರಡು ಕೈಗಳು ಅಡ್ಡ ಹಿಡಿದಳು. ಅವನು ಬಂದವನೆ ಸರಸರನೆ ಎರಡು ಕೈಗಳಿಗೆ ಬ್ಲೇಡ್ ಎಳೆದೇ ಬಿಟ್ಟ. ಅಲ್ಲೇ ಇದ್ದ ಡಾಕ್ಟರ್‌ಗಳು ಚಿಕಿತ್ಸೆ ಕೊಟ್ಟು ಬ್ಯಾಂಡೇಜ್ ಸುತ್ತಿದರು. ಸೆಕ್ಯೂರಿಟಿಗಳು ಆ ಹುಡುಗರನ್ನು ಥಳಿಸಹತ್ತಿದರು. ಅವಳು ಹೇಳಿದಳು, 'ನಾವು ಮಕ್ಕಳನ್ನು ಬದಲಾವಣೆ ಮಾಡಲು ಬಂದಿದ್ದೇವೆ. ಇದಕ್ಕೆಲ್ಲಾ ತಲೆ ಕೆಡಿಸಿಕೊಳ್ಳುವುದು ಬೇಡ'. ಇವಳ ಮೇಲಿನ ಈ ಹಲ್ಲೆಯಿಂದ ಕೌನ್ಸಿಲರುಗಳು, ಡಾಕ್ಟರುಗಳು ಸೆಕ್ಯೂರಿಟಿಗಳು ಗಾಬರಿಯಾಗಿದ್ದರು. ಎಲ್ಲರೂ ಕ್ಷಮಿಸಿ ಮೇಡಮ್ ಕ್ಷಮಿಸಿ ಎನ್ನುತ್ತಿದ್ದರು.

ಇವಳ ಕಾರು ಕಲಬುರ್ಗಿಯತ್ತ ಹೊರಟಿತ್ತು. ಇನ್ನೂ ಸೂರ್ಯಾಸ್ತವಾಗಿರಲಿಲ್ಲ. ಅವಳು ಕಾರನ್ನು ಕಾಗೀಣ ನದಿಯ ದಂಡೆಯ ಮೇಲೆ ನಿಲ್ಲಿಸಲು ಚಾಲಕನಿಗೆ ಹೇಳಿದಳು. ಕಾರಿನಿಂದ ಇಳಿದು ಅವನನ್ನು ದೂರ ಕರೆದುಕೊಂಡು ಹೋದಳು. 'ದೇವು, ನನ್ನನ್ನು ಕ್ಷಮಿಸು' ಎಂದಳು. ಇವನು ಮೌನವಾಗಿ ಇದ್ದ. ಸೂರ್ಯ ಪಶ್ಚಿಮದಲ್ಲಿ ದೂಳು ಬಡಿದುಕೊಂಡು ಬೂದಿಬಡಕನಾಗಿದ್ದ. 'ಒಂದು ಸತ್ಯ ಹೇಳಲೇಬೇಕು. ನನ್ನ ಮದುವೆ ಇನ್ನೂ ಎಂಟು ದಿನವಿತ್ತು. ಮೊದಲ ದಿನ ನಮ್ಮಮ್ಮ ಈ ಉದ್ಯಮಿಯ ಮದುವೆಯಾಗುವುದರಿಂದ ಎಷ್ಟು ಚೆನ್ನಾಗಿರಬಹುದು ಎಂದು ವಿವರಿಸಿ, ಅವನ ನೂರಾರು ಕಾರುಗಳು, ಆಳುಕಾಳುಗಳು, ಮಣಗಟ್ಟಲೆ ಬಂಗಾರ ನಿನ್ನದೆ ಎಂದು ಆಸೆ ಚಿಗುರಿಸಿದಳು. ಆಮೇಲೆ ಅಕ್ಕಂದಿರು ಅತ್ತಿಗೆ ಹೀಗೆ ಎಲ್ಲರೂ ದಿನಾಲು ನನಗೆ ಶ್ರೀಮಂತಿಕೆಯ ಜೀವನದ ಬಗ್ಗೆ ಪಾಠ ಮಾಡಿದರು. ನನಗೂ ನಿನ್ನ ಬಡತನ, ರಕ್ಷಣೆ ಇಲ್ಲದ ಜೀವನಕ್ಕಿಂತ ಆ ಜೀವನ ಒಳ್ಳೆಯದೆನಿಸಿ ಮದುವೆಗೆ ಒಪ್ಪಿಕೊಂಡೆ. ಆಮೇಲೆ ನಿನಗೆ ಮೋಸ ಮಾಡಿದ ಪಾಪಪ್ರಜ್ಞೆ ನನ್ನನ್ನು ಬಾದಿಸತೊಡಗಿತ್ತು. ನಾನು ಎಲ್ಲವನ್ನೂ ಮರೆಯಬೇಕಾಗಿತ್ತು. ಪ್ರಜ್ಞಾಪೂರ್ವಕವಾಗಿ ಮರೆಯಲು ಪ್ರಯತ್ನಿಸಿದೆ. ಹಿಂದಿನದನ್ನೆಲ್ಲಾ ಮರೆಯತೊಡಗಿದೆ. ಒಂದೊಂದು ಸಲ ಧುತ್ತನೆ ನಿನ್ನ ನೆನಪು. ಕಾಲೇಜಿನ ಕ್ಯಾಂಪಸ್, ಓಡಾಡಿದ ಸ್ಥಳಗಳು ನೆನಪಿಗೆ ಬಂದು ಸಾಯಬೇಕೆನಿಸುತ್ತಿತ್ತು. ಮತ್ತೆ ಒಮ್ಮಿಂದೊಮ್ಮೆಲೆ ನೆನಪುಗಳು ಸ್ಮೃತಿಯ ಕಕ್ಷೆಯಿಂದ ದೂರ ಹೋಗುತ್ತಿದ್ದವು'.

ಆಕೆ ಈ ಕಥೆಗಳನ್ನು ಹೇಳುವಾಗ ಬೆಳ್ಳಕ್ಕಿಯ ದಂಡೊಂದು ನೀರು ಕುಡಿದು ಮತ್ತೆ ಮೇಲೆ ಹಾರುತ್ತಿದ್ದವು. ಮತ್ತೆ ಉಸರಿದಳು, 'ಆಮೇಲೆ ಇದಕ್ಕೆ ಪರಿಹಾರ ಮಾರ್ಗವೆಂದರೆ ಕೆಲಸದಲ್ಲಿ ತೊಡಗಿಸಿಕೊಳ್ಳುವುದು ಎಂದು ಡಾಕ್ಟರ್ ಸಲಹೆ ಕೊಟ್ಟರು. ಅದರಂತೆ ನಾನು ಬಬಿತಾ ಭೂಮಿ ಫೌಂಡೇಶನ್ ಮಾಡಿದೆ. ನನಗೂ ಪ್ರಾಯಶ್ಚಿತ್ತದ ಹಾದಿ ಸಿಕ್ಕಿತ್ತು' ಎಂದು ನಕ್ಕಳು.

'ಇಂತಹ ಮಕ್ಕಳು ದೇಶದಾದ್ಯಂತ ಸಾವಿರಾರು ಸಂಖ್ಯೆಯಲ್ಲಿದ್ದಾರೆ. ಅವರೆಲ್ಲರೂ ನನ್ನ ಮಕ್ಕಳೆ' ಎಂದ ಆಕೆ ಇಂಥಹ ಮಕ್ಕಳಿಂದ ತಾನು ಹಲ್ಲೆಗೊಳಗಾದ ಗಾಯದ ಗುರುತುಗಳನ್ನು ತೋರಿಸಿದಳು. ಹತ್ತು ಹನ್ನೊಂದು ಕಡೆ ಗಾಯಗಳ ಕಲೆ ಇತ್ತು. ಈ ಹುಡುಗರು ಹಲ್ಲೆ ಮಾಡಿದರೆ ನನಗೆ ಚಿಕ್ಕಮಕ್ಕಳು ತಾಯಿಗೆ ಮೆಲ್ಲಗೆ ಒದ್ದಂತಹ ಅನುಭವವಾಗುತ್ತದೆ. ನನ್ನ ಪಾಪಗಳಿಗೆ ಇವೆಲ್ಲ ಉತ್ತರಗಳೆ ಎಂದು ಅವನನ್ನು ತಬ್ಬಿಕೊಂಡಳು. ಇವನು ಆ ಹನ್ನೆರಡು ಪೇಜಿನ ಪತ್ರ ಹರಿದು ಕಾಗೀಣಾ ನದಿಗೆ ಹಾಕಿ ಇನ್ನೋವಾ ಹತ್ತಿದ. ಎಲ್ಲಿಂದಲೊ ಹರಿದು ಬಂದ ನದಿ ಪ್ರೀತಿಯಂತೆ ಶುಭ್ರವಾಗಿತ್ತು... ಶಾಂತವಾಗಿತ್ತು... ಈತನಿಗೆ ಏನು ಮಾತಾಡಬೇಕು ಗೊತ್ತಾಗಲಿಲ್ಲ. ಸಂಜೆ ಕತ್ತಲ ಕಡೆ ವಾಲುತ್ತಿತ್ತು. ದೂಳನ್ನು ಕತ್ತಲು ಆಪೋಶನ ತೆಗೆದುಕೊಂಡಿತ್ತು. ●